# ಗಾರ್ಮೆಂಟ್: ಇನ್ನೂ ಆಗಿಲ್ಲ ವೇತನ ಪರಿಷ್ಕರಣೆ

■ ಎನ್. ನಾಗಪ್ಪ ಬೆಂಗಳೂರು

ಸಿದ್ಧ ಉಡುಪು ಕಾರ್ಖಾನೆಗಳ ಮಾಲೀಕರ ಲಾಬಿಯಿಂದ ಕಾರ್ಮಿಕರ ವೇತನ ಪರಿಷ್ಕರಣೆಗೆ ಸರಕಾರ ಮೀನಮೇಷ ಎಣಿಸುತ್ತಿದೆ ಎಂಬ ಮಾತು ಕೇಳಿ ಬರುತ್ತಿದೆ. ಇದರಿಂದಾಗಿ ಮಹಿಳಾ ಕಾರ್ಮಿಕರು ತೀವ್ರ ಸಂಕಷ್ಟಕ್ಕೆ ಸಿಲುಕುವಂತಾಗಿದೆ.

ಕನಿಷ್ಠ ವೇತನ ಕಾಯಿದೆ ಅನ್ವಯ ಪ್ರತಿ ಮೂರು ವರ್ಷಕ್ಕೊಮ್ಮೆ ವೇತನ ಪರಿಷ್ಕರಣೆಯಾಗಬೇಕಿದೆ. ಆದರೆ, ಸರಕಾರ 2009ರಿಂದ ಈವರೆಗೆ ವೇತನ ಪರಿಷ್ಕರಣೆಯನ್ನೇ ಮಾಡಿಲ್ಲ. ಗಾರ್ಮೆಂಟ್ಸ್ ಉದ್ದಿಮೆ ಹೊರತುಪಡಿಸಿ, ಉಳಿದ ಕೈಗಾರಿಕೆಗಳ ನೌಕರರ ವೇತನವನ್ನು ಮಾತ್ರ ಪರಿಷ್ಕರಿಸಿ ಆದೇಶ ಹೊರಡಿಸಿದೆ. ಹಾಗಾಗಿ, ಗಾರ್ಮೆಂಟ್ಸ್‌ಗಳಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರು ಸರಕಾರದ ಇಬ್ಬಗೆಯ ನೀತಿಯಿಂದ ಕಂಗಾಲಾಗಿದ್ದಾರೆ. ಆಹಾರ ಪದಾರ್ಥಗಳು ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಕಂಗೆಟ್ಟಿರುವ ಕಾರ್ಮಿಕರು ಜೀವನ ಬಂಡಿ ನಡೆಸಲು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೂ, ಕಾರ್ಮಿಕ ಇಲಾಖೆಯ ಅಧಿಕಾರಿಗಳು ಜಾಣಮೌನ ವಹಿಸಿದ್ದಾರೆ.

**ಸದ್ಯದ ವೇತನ ದರ (ದಿನಕ್ಕೆ)**

| ಬೆಂಗಳೂರು ನಗರ | ಜಿಲ್ಲೆಗಳು | ತಾಲೂಕು | ಗ್ರಾ.ಪಂ ವ್ಯಾಪ್ತಿ |
|---|---|---|---|
| 193.52 ರೂ. | 191.12 ರೂ. | 190.02 ರೂ. | 183.22 ರೂ. |

**ಉದ್ಯಮಿಗೆ ವರ, ಕಾರ್ಮಿಕರಿಗೆ ಶಾಪ:** ಕಾಲ ಕಾಲಕ್ಕೆ ವೇತನ ಪರಿಷ್ಕರಣೆಯಾಗದಿರುವುದು ಉದ್ಯಮಿಗಳಿಗೆ ವರವಾಗಿ ಪರಿಣಮಿಸಿದ್ದರೆ, ಕಾರ್ಮಿಕರಿಗೆ ಶಾಪವಾಗಿದೆ. ರಾಜ್ಯ ಸರಕಾರ 1979ರಲ್ಲಿ ಗಾರ್ಮೆಂಟ್ಸ್ ಉದ್ಯಮವನ್ನು ಕನಿಷ್ಠ ವೇತನ ಕಾಯಿದೆಯಡಿ 'ಟೈಲರಿಂಗ್ ಇಂಡಸ್ಟ್ರಿ' ಎಂದು ಗುರುತಿಸಿತು. ಅಂದಿನಿಂದ 4 ಬಾರಿ ಮಾತ್ರ ವೇತನ ಪರಿಷ್ಕರಣೆ ಮಾಡಲಾಗಿದೆ. ಆಡಳಿತ ಮಂಡಳಿಯ ಲಾಬಿಯಿಂದಾಗಿ 2001 ಮತ್ತು 2007ರಲ್ಲಿ ಏಳು ವರ್ಷಗಳ ಕಾಲಾವಧಿಯ ಬಳಿಕ ವೇತನ ಪರಿಷ್ಕರಿಸಲಾಗಿದೆ. 2007ರ ಕರಡು ಆದೇಶವು ಅಧಿಸೂಚನೆಯಾಗಿ ಹೊರಬರಲು ಎರಡು ವರ್ಷ ಹಿಡಿಯಿತು. ವೇತನ ಪರಿಷ್ಕರಣೆಯಲ್ಲಿ ಕನಿಷ್ಠ ಒಂದು ವರ್ಷ ವಿಳಂಬವಾದರೆ ಕೈಗಾರಿಕೋದ್ಯಮಿಗಳಿಗೆ 80-100 ಕೋಟಿ ರೂ. ಉಳಿತಾಯವಾಗುತ್ತದೆ.

**ಹೈಕೋರ್ಟ್ ಆದೇಶಕ್ಕಿಲ್ಲ ಕಿಮ್ಮತ್ತು:** ಸರಕಾರ 2009ರ ಮಾರ್ಚ್‌ನಲ್ಲಿ ತುಟ್ಟಿಭತ್ಯೆ ಸೇರಿ ದಿನಕ್ಕೆ 127 ರೂ. ನಿಗದಿಪಡಿಸಿ ಅಂತಿಮ ಆದೇಶ ಹೊರಡಿಸಿತ್ತು. ಆ ಬಳಿಕ ಉದ್ಯಮಿಗಳ ಒತ್ತಡಕ್ಕೆ ಮಣಿದ ಸರಕಾರ 'ಟೈಪ್ ಮಾಡುವಾಗ ತಪ್ಪಾಗಿದೆ' ಎಂಬ ಕ್ಷುಲ್ಲಕ ಕಾರಣ ನೀಡಿ, ಈ ಆದೇಶವನ್ನು ಹಿಂಪಡೆಯಿತು. ಮಾರ್ಚ್ 2010ರಲ್ಲಿ ಹೊರಡಿಸಿದ ಹೊಸ ಆದೇಶದಲ್ಲಿ 4.88 ರೂ. ಕಡಿತಗೊಳಿಸಿ 122 ರೂ. ನಿಗದಿಪಡಿಸಿತು.

ಇದನ್ನು ಗಾರ್ಮೆಂಟ್ಸ್ ಕಾರ್ಮಿಕರ ಸಂಘಟನೆ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದಾಗ 2010ರ ಸರಕಾರದ ಆದೇಶವನ್ನು ರದ್ದುಪಡಿಸಿತು. ಗಾರ್ಮೆಂಟ್ಸ್ ನೌಕರರಿಗೆ ದಿನಕ್ಕೆ 127 ರೂ. ವೇತನ ನಿಗದಿಪಡಿಸುವ ಸಂಬಂಧ ಮೂರು ತಿಂಗಳೊಳಗೆ ಕಾರ್ಮಿಕ ಸಂಘಟನೆಗಳು ಮತ್ತು ಕೈಗಾರಿಕೆಗಳ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ, ಹೊಸ ಆದೇಶ ಹೊರಡಿಸಬೇಕೆಂದು ತೀರ್ಪು ನೀಡಿದೆ.

ಆದರೆ, ನ್ಯಾಯಾಲಯದ ಆದೇಶಕ್ಕೂ ಕಿಮ್ಮತ್ತು ನೀಡದ ಸರಕಾರ ಏಳು ತಿಂಗಳು ಕಳೆದರೂ, ಕನಿಷ್ಠ ವೇತನ ದರ ನಿಗದಿಪಡಿಸಿಲ್ಲ. ಹಾಗಾಗಿ, ಕಾರ್ಖಾನೆಗಳ ಆಡಳಿತ ಮಂಡಳಿಗಳು ಕೇವಲ 122 ರೂ. ವೇತನವನ್ನೇ ನೀಡುತ್ತಿದ್ದು, ಕಾರ್ಮಿಕರನ್ನು ವಂಚಿಸುತ್ತಿವೆ. ಸದ್ಯ ಗಾರ್ಮೆಂಟ್ಸ್ ನೌಕರರಿಗೆ ತುಟ್ಟಿಭತ್ಯೆ ಸೇರಿ 193.52 ರೂ. ನೀಡಲಾಗುತ್ತಿದೆ.

> **2010ರ ಸರಕಾರಿ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿ 7 ತಿಂಗಳು ಕಳೆದಿದೆ. ಇನ್ನೂ 127 ರೂ. ವೇತನ ನಿಗದಿಪಡಿಸಿಲ್ಲ. ಈ ಸಂಬಂಧ ಕಾರ್ಮಿಕ ಇಲಾಖೆಗೆ ಹಲವು ಬಾರಿ ಪತ್ರ ಬರೆದರೂ ಪ್ರಯೋಜನವಾಗಿಲ್ಲ. ಮೂರು ವರ್ಷಕ್ಕೊಮ್ಮೆ ವೇತನ ಪರಿಷ್ಕರಿಸಬೇಕೆಂಬ ನಿಯಮವಿದೆ. ಮಾಲೀಕರ ಲಾಬಿಗೆ ಮಣಿದಿರುವ ಸರಕಾರ 4 ವರ್ಷ ಕಳೆದರೂ ವೇತನ ಪರಿಷ್ಕರಣೆ ಮಾಡಿಲ್ಲ.**
>
> **-ಆರ್.ಪ್ರತಿಭಾ, ಉಪಾಧ್ಯಕ್ಷೆ, ಗಾರ್ಮೆಂಟ್ ಅ್ಯಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್**